# ಕರ್ನಾಟಕ ಸರ್ಕಾರ

**Government of Karnataka**
**SECRETARIAT- IDD.**
**O/o Director-IDD**

---

## SUBJECT

| | | |
|---|---|---|
| **Main Category** | : | Category 8. Projects or Works or Management |
| **Sub Category** | : | |
| **Description** | : | 2025-26 ನೇ ಸಾಲಿನ ಬಜೆಟ್ ಪ್ಯಾರಾ ಸಂಖ್ಯೆ154 ರಲ್ಲಿ ಘೋಷಿತ ಪಿಪಿಪಿ ಮಾದರಿ ಯೋಜನೆ - ಕೋಲಾರದಲ್ಲಿ ವೈದ್ಯಕೀಯ ಕಾಲೇಜಿನ ಸ್ಥಾಪನೆ ಕುರಿತು |

---

## OTHER DETAILS

| | | |
|---|---|---|
| **Language** | : | English |
| **Remarks** | : | |
| **Previous References** | : | |
| **Later References** | : | |

**Note # 1**
ಕಡತ ಸೃಜಿಸಿದೆ.

ದಿ:21.07.2025 ರಂದು ವೈ.ಶಿ.ಇ ಯಿಂದ ಇ-ಮೇಲ್ ಮುಖಾಂತರ ಸ್ವೀಕೃತವಾದ concept note ನ್ನು ಕಡತದಲ್ಲಿ ದಾಖಲಿಸಿ ಸಲ್ಲಿಸಿದೆ.

**24/07/2025 01:39 PM** | **Typist TYPIST**

---

**Note # 2**
ಕೋಲಾರ ಜಿಲ್ಲೆಯಲ್ಲಿ ಎರಡು ಖಾಸಗಿ ವೈದ್ಯಕೀಯ ಕಾಲೇಜುಗಳಿದ್ದು ಯಾವುದೇ ಸರ್ಕಾರಿ ವೈದ್ಯಕೀಯ ಕಾಲೇಜು ಇರುವುದಿಲ್ಲ. ಕರ್ನಾಟಕ ಸರ್ಕಾರದ 2025-26 ನೇ ಸಾಲಿನ ಆಯವ್ಯಯ ಪಾರಾ-154 ರಂತೆ ಕೋಲಾರದಲ್ಲಿ ಮೆಡಿಕಲ್ ಕಾಲೇಜು ನಿರ್ಮಾಣವನ್ನು ಸಾರ್ವಜನಿಕ-ಖಾಸಗಿ-ಸಹಭಾಗಿತ್ವದಡಿಯಲ್ಲಿ ಕೈಗೊಳ್ಳಲು ಪ್ರಸ್ತಾಪಿಸಲಾಗಿರುತ್ತದೆ. ಅದರಂತೆ, ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶನಾಲಯವು ದಿ.21.07.2025 ರಂದು ಇ-ಮೇಲ್ ಮೂಲಕ ಪರಿಕಲ್ಪನಾ ಟಿಪ್ಪಣಿಯನ್ನು ತಯಾರಿಸಿ ಸಲ್ಲಿಸಲಾಗಿರುತ್ತದೆ. ಪರಿಕಲ್ಪನಾ ಟಿಪ್ಪಣಿಯಲ್ಲಿ ವಿವರಿಸಿರುವಂತೆ ಕೋಲಾರದಲ್ಲಿ ಹಾಲಿ ಇರುವ ಜಿಲ್ಲಾ ಆಸ್ಪತ್ರೆಯನ್ನು ಅಭಿವೃದ್ಧಿಗೊಳಿಸಲು ಹಾಗೂ ವೈದ್ಯಕೀಯ ಕಾಲೇಜು ನಿರ್ಮಿಸಲು ರೂ.450.00 ಕೋಟಿಗಳು ಬೇಕಾಗಿರುತ್ತದೆ ಎಂದು ತಿಳಿಸಲಾಗಿರುತ್ತದೆ.
ಜಿಲ್ಲಾ ಆಸ್ಪತ್ರೆಯು 14.30 ಎಕರೆ ಜಾಗದಲ್ಲಿದ್ದು ಮೆಡಿಕಲ್ ಕಾಲೇಜು ಕಟ್ಟಡಗಳಿಗೆಹೆಚ್ಚುವರಿಯಾಗಿ 10.00 ಎಕರೆ ಜಾಗವನ್ನು ಗುರುತಿಸಬೇಕಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಮೇಲ್ನೋಟಕ್ಕೆ ಈ ಯೋಜನೆಯನ್ನು ಪಿ.ಪಿ.ಪಿ ಅಡಿಯಲ್ಲಿ ಕೈಗೊಳ್ಳಲು ಸೂಕ್ತವಿದೆ ಎಂದು ಕಂಡುಬರುತ್ತಿದ್ದು ಆದರೆ ಅದು ಕಾರ್ಯಸಾಧ್ಯತಾ ಅಧ್ಯಯನದ ಮೂಲಕ ಮಾತ್ರ ಖಚಿತ ಪಡಿಸಬಹುದಾಗಿರುತ್ತದೆ ಎಂಬ ಅಭಿಪ್ರಾಯದೊಂದಿಗೆ ಸ್ವೀಕೃತಗೊಂಡ Concept Note ಗೆ ತಾತ್ವಿಕ ಅನುಮೋದನೆ ನೀಡಲು ಕೋರಿದೆ.

**25/07/2025 01:35 PM** | **M PRAKASH EXECUTIVE ENGINEER**

---

**Note # 3**
10 Acres additional land is required in addition to existing 14-30 acres disdtrict hospital to establish Medical college at KOLAR in PPP model.Who has to aquire 10 acres is not clear in the concept note submitted by Medical education Dept.Medical education Dept may be asked to clearly decide on the who should provide and who should bear cost of acquisition.

**25/07/2025 06:20 PM** | **Govinda Reddy DIRECTOR**

---

**Note # 4**
Agreed to approve in principle. Land details may be clarified later when RFP/ DCA are sent to SLSWA.

**25/07/2025 06:47 PM** | **DR MANJULA N SECRETARY**

---

**Note # 5**

28/07/2025 12:41 PM

**Govinda Reddy**
**DIRECTOR**

---

## Note # 6

14/08/2025 12:34 PM

**M PRAKASH**
**EXECUTIVE ENGINEER**

---

## Note # 7

ದಿ: 05.08.2025 ರಂದು ನಿರ್ದೇಶಕರು ವೈ.ಶಿ ಇಲಾಖೆಗೆ ಇವರಿಗೆ ಬರೆದendorsement ಹಾಗೂ ದಿ: 06.08.2025 ರಂದು ನಡೆದ 34ನೇ SLSWA ಸಭೆಯ ನಡವಳಿಯನ್ನು ಕಡತದಲ್ಲಿ ದಾಖಲಿಸಿ ಸಲ್ಲಿಸಿದೆ.

14/08/2025 12:48 PM

**Typist**
**TYPIST**

---

## Note # 8

ಕಡತವನು ತಾ.ಮು ಗೊಳಿಸಿ.

14/08/2025 12:49 PM

**M PRAKASH**
**EXECUTIVE ENGINEER**

---

**Concept Note for Upgradation of Kolar District Hospital and Development of Medical Colleges on Public Private Partnership Model**

<table>
<tr><th>S. No.</th><th>Sections</th><th>Details</th></tr>
<tr><td>1</td><td>Project concept</td><td>
1. Need of project –<br>
To provide affordable medical education and address the shortage of the medical professionals in the region and enhance the region’s healthcare infrastructure, ensure equitable access to advanced medical services. To attract private investment for enhancing the Healthcare and Medical Education infrastructure in the state.<br>
2. Role of the private Entity who will implement/operate the Project –<br>
Private Entity shall Develop, Operate and Maintain the Medical College for 150 Seats, of which atleast 40% of the seats which shall be provided at Government rates.<br>
Further, Private Entity is also required to undertake augmentation of the existing District Hospital as Teaching Hospital, and handover the upgraded hospital to the Government for operations and maintenance.<br>
3. Type of private entity which shall be suitable for project Implementation / operations.<br>
Service provider with a prior experience of developing recognized and operational medical college in India and developing NABH accredited functional hospitals in India in the past 15 financial years.<br>
4. Demand aspects of the project-<br>
The district of Kolar has two medical colleges (of cumulatively 350 seats) run by Educational Trusts. However, there is no Government Medical College in the district of Kolar.<br>
Further, setting up of medical college and upgradation of Healthcare facilities in Kolar district would have a wider catchment region, including the peripherals of the Bengaluru city, Bengaluru Rural Districts and also the bordering districts of the Andhra Pradesh and Tamil Nadu.<br>
5. Possible revenue streams in the project-<br>
The medical college would have revenue streams predominantly from the fees for various categories of admission like:<br>
i. Government Quota<br>
ii. Private Quota<br>
iii. NRI/Management Quota<br>
Since the operations of Hospital would be undertaken by the Government after upgradation, no operational revenues are envisaged for the Private Entity from the Hospital.
</td></tr>
</table>

Gmail

Director IDD PPP Cell <iddpppcell@gmail.com>

# Concept note kolar

1 message

**Ramesh Reva** <ramesh2reva@gmail.com> Mon, Jul 21, 2025 at 5:04 PM
To: iddpppcell@gmail.com, DME Karnataka <dmekarnataka@yahoo.com>

Dr Ramesh Revanna

**DOC-20250619-WA0102..pdf**
1078K

**Concept Note for Upgradation of Kolar District Hospital and Development of Medical Colleges on Public Private Partnership Model**

| S. No. | Sections | Details |
|---|---|---|
| 1 | Project concept | 1. **Need of project –**<br><br>To provide affordable medical education and address the shortage of the medical professionals in the region and enhance the region's healthcare infrastructure, ensure equitable access to advanced medical services. To attract private investment for enhancing the Healthcare and Medical Education infrastructure in the state.<br><br>2. **Role of the private Entity who will implement/operate the Project –**<br><br>Private Entity shall Develop, Operate and Maintain the Medical College for 150 Seats, of which atleast 40% of the seats which shall be provided at Government rates.<br><br>Further, Private Entity is also required to undertake augmentation of the existing District Hospital as Teaching Hospital, and handover the upgraded hospital to the Government for operations and maintenance.<br><br>3. **Type of private entity which shall be suitable for project Implementation / operations.**<br><br>Service provider with a prior experience of developing recognized and operational medical college in India and developing NABH accredited functional hospitals in India in the past 15 financial years.<br><br>4. **Demand aspects of the project-**<br><br>The district of Kolar has two medical colleges (of cumulatively 350 seats) run by Educational Trusts. However, there is no Government Medical College in the district of Kolar.<br><br>Further, setting up of medical college and upgradation of Healthcare facilities in Kolar district would have a wider catchment region, including the peripherals of the Bengaluru city, Bengaluru Rural Districts and also the bordering districts of the Andhra Pradesh and Tamil Nadu.<br><br>5. **Possible revenue streams in the project-**<br><br>The medical college would have revenue streams predominantly from the fees for various categories of admission like:<br><br>i. Government Quota<br>ii. Private Quota<br>iii. NRI/Management Quota<br><br>Since the operations of Hospital would be undertaken by the Government after upgradation, no operational revenues are envisaged for the Private Entity from the Hospital. |

ವಿಷಯ:- 2025-26 ನೇ ಸಾಲಿನ ಬಜೆಟ್ ಪ್ಯಾರಾ ಸಂಖ್ಯೆ 154 ರಲ್ಲಿ ಘೋಷಿಸಿರುವಂತೆ ಕೋಲಾರದಲ್ಲಿ ವೈದ್ಯಕೀಯ ಕಾಲೇಜನ್ನು ಪಿಪಿಪಿ ಅಡಿಯಲ್ಲಿ ಅಭಿವೃದ್ಧಿಪಡಿಸುವ ಬಗ್ಗೆ.

---

ಐಡಿಡಿ 65 ಐಟಿಎಸ್2025 (1853653)

ಮೂಲಸೌಲಭ್ಯ ಅಭಿವೃದ್ಧಿ, ಬಂದರು
ಮತ್ತು ಒಳನಾಡು ಜಲಸಾರಿಗೆ ಇಲಾಖೆ
ದಿನಾಂಕ: 05.08.2025

ದಿನಾಂಕ:21-07-2025ರಂದು ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ಇ-ಮೇಲ್ ಮುಖಾಂತರ ಸ್ವೀಕೃತವಾದ ಪರಿಕಲ್ಪನಾ ಟಿಪ್ಪಣಿಯನ್ನು ಪರಿಶೀಲಿಸಲಾಯಿತು. ಕೋಲಾರದಲ್ಲಿ ಹೊಸ ವೈದ್ಯಕೀಯ ಕಾಲೇಜನ್ನು ಪಿಪಿಪಿ ಅಡಿಯಲ್ಲಿ ಅಭಿವೃದ್ಧಿಗೊಳಿಸಲು ರೂ.450 ಕೋಟಿಗಳನ್ನು ಅಂದಾಜಿಸಲಾಗಿರುತ್ತದೆ. ಹಾಲಿ ಇರುವ ಜಿಲ್ಲಾ ಆಸ್ಪತ್ರೆಯು 14.30 ಎಕರೆ ಜಾಗದಲ್ಲಿದ್ದು, ಹೊಸ ಮೆಡಿಕಲ್ ಕಾಲೇಜು ಕಟ್ಟಡಗಳಿಗೆ ಹೆಚ್ಚುವರಿಯಾಗಿ 10.0 ಎಕರೆ ಜಾಗವನ್ನು ಗುರುತಿಸಬೇಕಾಗಿರುತ್ತದೆ ಎಂದು ತಿಳಿಸಲಾಗಿರುತ್ತದೆ. ಪರಿಕಲ್ಪನಾ ಟಿಪ್ಪಣಿಯು ದಿನಾಂಕ:25-07-2025 ರಂದು ಅನುಮೋದನೆಗೊಂಡಿರುವುದರಿಂದ ಸದರಿ ಯೋಜನೆಗೆ ಬೇಕಾಗಿರುವ ಹೆಚ್ಚುವರಿ ಜಾಗವನ್ನು ಸಂಬಂಧಪಟ್ಟ ಇಲಾಖೆಯಿಂದ ಹಸ್ತಾಂತರಿಸಿಕೊಳ್ಳಲು ಕ್ರಮ ಕೈಗೊಳ್ಳುವುದು ಹಾಗೂ ಹೆಚ್ಚುವರಿ ಜಾಗವನ್ನು ಪಡೆದ ನಂತರ ಪಿಪಿಪಿ ಕೋಶದ Empanelled list ನಲ್ಲಿ ನೋಂದಾಯಿಸಲ್ಪಟ್ಟಿರುವ ವ್ಯವಹರಣಾ ಸಲಹೆಗಾರರನ್ನು (TA) ನೇಮಿಸಿಕೊಳ್ಳಲು ಕ್ರಮ ಕೈಗೊಳ್ಳುವುದು.

(ಮಾನ್ಯ ಕಾರ್ಯದರ್ಶಿಗಳು,
ಮೂಲಸೌಲಭ್ಯ ಅಭಿವೃದ್ಧಿ, ಬಂದರು
ಮತ್ತು ಒಳನಾಡು ಜಲಸಾರಿಗೆ
ಇಲಾಖೆರವರಿಂದ ಅನುಮೋದಿತ)

(ಪುರುಷೋತ್ತಮ್ ಸಿಂಗ್.ಬಿ. ಹೆಚ್, ಕೆ.ಟಿ.ಎಸ್)
ನಿರ್ದೇಶಕರು ,(ಪ್ರ) ಪಿಪಿಪಿ ಕೋಶ,
ಮೂಲಸೌಲಭ್ಯ ಅಭಿವೃದ್ಧಿ, ಬಂದರುಗಳು
ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಇವರಿಗೆ,
ನಿರ್ದೇಶಕರು,
ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶನಾಲಯ
ಓಲ್ಡ್ ಬಿ.ಎಂ.ಸಿ.ಆರ್.ಐ
ಕೆ.ಆರ್. ರಸ್ತೆ ಬೆಂಗಳೂರು

**ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ ದಿನಾಂಕ 06.08.2025 ರಂದು ನಡೆದ 34ನೇ ಪಿಪಿಪಿ ಯೋಜನೆಗಳ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯ ನಡವಳಿಗಳು**

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಲಗತ್ತಿಸಿದೆ.

ಸರ್ಕಾರದ ಕಾರ್ಯದರ್ಶಿಗಳು, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಹಾಗೂ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಪಿಪಿಪಿ ಯೋಜನೆಗಳ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿಯ ಅಧ್ಯಕ್ಷರಾದ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಸಮಿತಿಯ ಇತರ ಸದಸ್ಯರುಗಳು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಇಲಾಖೆಗಳ ಮುಖ್ಯಸ್ಥರುಗಳು, ಅಧಿಕಾರಿಗಳನ್ನು ಸ್ವಾಗತಿಸಿದರು.

ಮುಂದುವರೆಸಿ, 34ನೇ ಪಿಪಿಪಿ ಯೋಜನೆಗಳ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯ ಕಾರ್ಯಸೂಚಿಯಲ್ಲಿ ತಿಳಿಸಿದಂತೆ, ವಿಷಯಸೂಚಿಯನ್ವಯ ಯೋಜನೆಗಳನ್ನು ಪ್ರಾತ್ಯಕ್ಷಿಕೆಯ ಮೂಲಕ ಚರ್ಚೆಗೆ ಮಂಡಿಸಿದರು.

**ವಿಷಯ-1 ದಿನಾಂಕ 17.05.2025 ರಂದು ಜರುಗಿದ 33ನೇ ಪಿಪಿಪಿ ಯೋಜನೆಗಳ ರಾಜ್ಯಮಟ್ಟದ ಏಕಗವಾಕ್ಷಿ ಸಮಿತಿ ಸಭೆಯ ನಡವಳಿಯನ್ನು ಓದಿ ದೃಢೀಕರಿಸುವುದು.**

ದಿನಾಂಕ 17.05.2025 ರಂದು ಜರುಗಿದ 33ನೇ ಪಿಪಿಪಿ ಯೋಜನೆಗಳ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯ ನಡವಳಿಯನ್ನು ಓದಲಾಯಿತು. ಸದರಿ ನಡವಳಿಗಳ ಮೇಲೆ ಇಲಾಖೆಗಳಿಂದ ಯಾವುದೇ ಸಲಹೆಗಳು / ಪ್ರತಿಕ್ರಿಯೆ ಬಾರದೇ ಇರುವುದರಿಂದ, ಸಭೆಯು ನಡವಳಿಯನ್ನು ಸ್ವೀಕರಿಸಿ ದಾಖಲಿಸಿತು.

**ವಿಷಯ-2 ದಿನಾಂಕ 17.05.2025 ರಂದು ಜರುಗಿದ 33ನೇ ಪಿಪಿಪಿ ಯೋಜನೆಗಳ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯ ನಡವಳಿಗಳ ನಿರ್ದೇಶನಗಳ ಮೇಲೆ ಆಡಳಿತ ಇಲಾಖೆ / ಸಂಸ್ಥೆಗಳು ತೆಗೆದುಕೊಂಡ ಕ್ರಮದ ಬಗ್ಗೆ 34ನೇ ಸಭೆಗೆ ಮಂಡಿಸಲು ನೀಡಲಾದ ಅನುಪಾಲನಾ ವರದಿ**

| ಸಂ ಖ್ಯೆ | ವಿಷಯ | ಇಲಾಖೆ | 34ನೇ ಸಭೆಗೆ ಮಂಡಿಸಲು ಆಡಳಿತ ಇಲಾಖೆಯಿಂದ ಸ್ವೀಕೃತ ಮಾಹಿತಿ | 34ನೇ ಸಭೆಯ ನಿರ್ದೇಶನ |
|---|---|---|---|---|
| 3.1 | ಕೊಡಗು ಜಿಲ್ಲೆ ಮಡಿಕೇರಿಯ ಗ್ರೇಟರ್ ರಾಜಾ ಸೀಟು | ತೋಟಗಾರಿಕೆ | ರಿಯಾಯಿತಿದಾರರ ಆಯ್ಕೆಗೆ ಟೆಂಡರ್ ಆಹ್ವಾನಿಸಲಾಗಿದ್ದು, | ರಿಯಾಯಿತಿದಾರರನ್ನು ಕೂಡಲೇ ಆಯ್ಕೆ ಮಾಡಿ |

## List of Correspondences

| Receipt No. / Issue No. | Subject | Type | Marked As | Attached On | Issued On | Pages | Remarks |
|---|---|---|---|---|---|---|---|
| 10731155/2025/O/o DR-IDD | 34th SLSWA Proceedings - 06.08.2025 | Receipt | | 14/08/2025 12:44 PM | | 12-46 | . |
| 10731118/2025/O/o DR-IDD | Endorsement to MED-05.08.2025-Kolar Medical College | Receipt | | 14/08/2025 12:42 PM | | 11-11 | . |
| 10594735/2025/O/o DR-IDD | Budget para_154_Medical college at BagalKote and kolar | Receipt | | 14/08/2025 12:35 PM | | 10-10 | . |
| 10579223/2025/O/o DR-IDD | Gmail - Concept note kolar-21.07.2025 | Receipt | | 24/07/2025 01:22 PM | | 9-9 | . |
| 10578909/2025/O/o DR-IDD | Concept Note-Kolar Medical College | Receipt | | 24/07/2025 01:11 PM | | 1-8 | . |

**Concept Note for Upgradation of Kolar District Hospital and Development of Medical Colleges on Public Private Partnership Model**

| S. No. | Sections | Details |
|---|---|---|
| 1 | Project concept | 1. **Need of project –**<br>To provide affordable medical education and address the shortage of the medical professionals in the region and enhance the region's healthcare infrastructure, ensure equitable access to advanced medical services. To attract private investment for enhancing the Healthcare and Medical Education infrastructure in the state.<br>2. **Role of the private Entity who will implement/operate the Project –**<br>Private Entity shall Develop, Operate and Maintain the Medical College for 150 Seats, of which atleast 40% of the seats which shall be provided at Government rates.<br>Further, Private Entity is also required to undertake augmentation of the existing District Hospital as Teaching Hospital, and handover the upgraded hospital to the Government for operations and maintenance.<br>3. **Type of private entity which shall be suitable for project Implementation / operations.**<br>Service provider with a prior experience of developing recognized and operational medical college in India and developing NABH accredited functional hospitals in India in the past 15 financial years.<br>4. **Demand aspects of the project-**<br>The district of Kolar has two medical colleges (of cumulatively 350 seats) run by Educational Trusts. However, there is no Government Medical College in the district of Kolar.<br>Further, setting up of medical college and upgradation of Healthcare facilities in Kolar district would have a wider catchment region, including the peripherals of the Bengaluru city, Bengaluru Rural Districts and also the bordering districts of the Andhra Pradesh and Tamil Nadu.<br>5. **Possible revenue streams in the project-**<br>The medical college would have revenue streams predominantly from the fees for various categories of admission like:<br>i. Government Quota<br>ii. Private Quota<br>iii. NRI/Management Quota<br>Since the operations of Hospital would be undertaken by the Government after upgradation, no operational revenues are envisaged for the Private Entity from the Hospital. |

| S. No. | Sections | Details |
|---|---|---|
| 2 | Site conditions | **<u>Land for Development of Medical College:</u>**<br><br>The current SNR District Hospital premises doesn't have sufficient vacant land for development of medical college. Hence, alternate land of about 10 acres need to be identified within 10 Km radius of the SNR District Hospital, for development of the medical college.<br><br>Necessary action to be initiated from the District Administration.<br><br>Once the land is identified, the site conditions shall be assessed accordingly.<br><br>**<u>Land for Upgradation of Medical College:</u>**<br><br>1. **Extent of land of the project site** – SNR District Hospital spread across 14.3 Acres.<br><br> |

| S. No. | Sections | Details |
|---|---|---|
| | | |



| Area Statement of SNR District Hospital, Kolar | | |
|---|---|---|
| **Description** | **Area in Sqm** | **Area in Acre** |
| SNR Hospital – 1 | 54325.00 | 13.42 |
| SNR Hospital – 2 | 3776.23 | 0.93 |
| Total | 58101.23 | 14.35 |

2. **Location coordinates and address of the site -**SNR Hospital, Bangarpet Circle, Gowripete, Kolar, Karnataka 563101

3. **Details on the condition of the site in terms of number and type of existing structures, built-up areas of the existing structures, zoning/ use premises**

| S. No. | Sections | Details | | | |
|---|---|---|---|---|---|
| | | **S.No** | **Name of the building** | **Built up area (in sqm)** | **No. of Floors** |
| | | 1 | Blood bank | 329 | 1 |
| | | 2 | Geriatric | 206 | 1 |
| | | 3 | Homeopathy | 610 | 1 |
| | | 4 | MCH | 4595 | 3 |
| | | 5 | Mortuary | 259 | 1 |
| | | 6 | Engineering block | 260 | 1 |
| | | 7 | Old Paediatric ward | 579 | 2 |
| | | 8 | DNB building | 559 | 1 |
| | | 9 | New surgical block | 6910 | 2 |
| | | 10 | Old building block | 6360 | 2 |
| | | 11 | ICU block | 3360 | 2 |
| | | 12 | Quarter In front of blood bank | 1961 | 1 |
| | | 13 | Quarters on NW corner | 633 | 1 |
| | | 14 | New Quarters (MCH) | 1464 | 3 |
| | | 15 | Ladies Hostel | 1473 | 1 |
| | | 16 | Old Multi-storey Building | 1961 | 3 |

| S. No. | Sections | Details |
|---|---|---|

| | | | |
|---|---|---|---|
| 17 | SNR Hospital -2 | 413 | 1 |
| | **Total** | **31931** | |

4. **Pictures of the site, if available:**





<table>
<tr><th>S. No.</th><th>Sections</th><th>Details</th></tr>
<tr><td></td><td></td><td><br><br>5. In case of brownfield assets (such as existing hospital/ hotel/ park/ etc.), please provide existing usage of the asset<br><br>Details provided above<br><br>6. Any concerns on the site which may affect the project such as ‘no approach road’, ‘highly undulated land’, ‘site contains natural water body or stream’, ‘HT transmission lines passing through the site’, etc.-<br><br>The existing land parcel has been fully utilized, leaving no vacant space on-site. However, some of the existing and unused structures could be demolished for development of new hospital blocks.</td></tr>
<tr><td>3</td><td>Project commercials</td><td>Detailed commercials of the project would be computed after finalization of land and project cost accordingly.<br><br>However, the revenue streams for the project would be as detailed above.</td></tr>
</table>

<table>
<tr><th>S. No.</th><th>Sections</th><th>Details</th></tr>
<tr><td>4</td><td>Project components</td><td>Project components includes the following:<br><br>
<table>
<tr><th>A.</th><th>Components for the Teaching Hospital's Augmentation</th></tr>
<tr><td>1</td><td>Site Development</td></tr>
<tr><td>2</td><td>Additional Civil Works - Buildings, Interiors and Furniture etc.</td></tr>
<tr><td>3</td><td>Retro-Fitting of Old Structures</td></tr>
<tr><td>4</td><td>Hospital Infrastructure – Beds, Equipment & machinery, Medical Supplies, Diagnostic Services etc.</td></tr>
<tr><td>5</td><td>Landscaping, Parking and other ancillary facilities</td></tr>
<tr><td>6</td><td>Other miscellaneous items</td></tr>
<tr><th>B</th><th>Components for the Medical College</th></tr>
<tr><td>1.</td><td>Site Development</td></tr>
<tr><td>2.</td><td>Medical College (including Administrative Block), inclusive of Interiors and Furniture, Equipment and Machinery etc.</td></tr>
<tr><td>3.</td><td>Residential Block - Hostels for medical students, accommodations for faculty etc.</td></tr>
<tr><td>4.</td><td>Landscaping, Parking and other ancillary Facilities</td></tr>
<tr><td>5.</td><td>Communication and IT Infrastructure</td></tr>
<tr><td>6.</td><td>Other miscellaneous items</td></tr>
</table>
</td></tr>
<tr><td>5</td><td>Project cost</td><td>Tentatively project cost is estimated as below.<br><br>
<table>
<tr><th>S.No</th><th>Particulars</th><th>Tentative Project Cost (INR Cr)</th></tr>
<tr><td>1</td><td>Upgradation of Hospital - New 300 bed Hospital Block</td><td>150</td></tr>
<tr><td>2</td><td>Development of Medical College - Teaching Block+ Admin+ Boarding Facilities</td><td>200</td></tr>
<tr><td>3</td><td>Preoperative & Preliminary Expenses</td><td>50</td></tr>
<tr><td>4</td><td>Other Financing and Miscellaneous Expenses</td><td>50</td></tr>
<tr><td></td><td>Total Project</td><td>450</td></tr>
</table>
<u>Note:</u><br>
a. The above mentioned project cost is only a tentative estimate.<br>
b. The exact computation of the exact project shall be undertaken after identification of the suitable land parcel for development of medical college.<br>
c. In case new hospital blocks are required in the District Hospital, suitable vacant land shall be identified within the hospital premises.<br>
d. Alternatively, any existing and unused structure could also be demolished for upgradation of the hospital.</td></tr>
<tr><td>6.</td><td>Basis for PPP</td><td>The Government of Karnataka, has announced the development of Medical College in Kolar District on PPP model, under the state budget FY 2025-26.</td></tr>
</table>



File No. IDD-ITS/65/2025-O/o-SECRETARIAT- IDD. (Computer No. 1853653)

Generated from eOffice by Typist, Ty1-pppcell(NS), TYPIST, SECRETARIAT- IDD. on 19/05/2026 01:07 PM

| S. No. | Sections | Details |
|---|---|---|
| | | Further, the Department of Economic Affairs, Government of India has also provided guidance framework for setting up of Medical College in PPP Model, by utilizing the existing District Hospitals on the condition that:<br>a) States fully allow the facilities of the hospital to the medical college<br>b) States provide land to the medical college at a concession.<br><br>In view of the guidance framework provided by the Government of India, and the decision of the state Government to encourage private investment in development of Medical Colleges and Health care infrastructure, it is envisaged to undertake the development of the project on the PPP model. The commercial advantages of undertaking the project under PPP shall be analysed based on the financial feasibility assessment. |

Gmail **Director IDD PPP Cell <iddpppcell@gmail.com>**

# Concept note kolar

1 message

**Ramesh Reva** <ramesh2reva@gmail.com> Mon, Jul 21, 2025 at 5:04 PM
To: iddpppcell@gmail.com, DME Karnataka <dmekarnataka@yahoo.com>

Dr Ramesh Revanna

**DOC-20250619-WA0102..pdf**
1078K

**ಕರ್ನಾಟಕ ಸರ್ಕಾರ**

ಸಂಖ್ಯೆ: ಎಂಇಡಿ 133 ಎಂಎಂಸಿ 2025 (ಭಾಗ-6)

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:22.07.2025

Recd on: 23/7 @ 4:50pm

**ಅನಧಿಕೃತ ಟಿಪ್ಪಣಿ**

**ವಿಷಯ:** 2025-26ನೇ ಸಾಲಿನ ಆಯವ್ಯಯ ಕಂಡಿಕೆ 154 ರ ಘೋಷಣೆಯ ಕುರಿತು.

**ಉಲ್ಲೇಖ:** ತಮ್ಮ ಅ.ಸ. ಪತ್ರಗಳ ದಿನಾಂಕ:14.07.2025

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ ಅ.ಸ ಪತ್ರದಲ್ಲಿ ಬಾಗಲಕೋಟೆಯಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವ ವಿದ್ಯಾಲಯದ ಘಟಕ ವೈದ್ಯಕೀಯ ಕಾಲೇಜು ಹಾಗೂ ಕೋಲಾರದಲ್ಲಿ ವೈದ್ಯಕೀಯ ಕಾಲೇಜನ್ನು ಸ್ಥಾಪನೆ ಯೋಜನೆಗಳ ಮುಂದಿನ ಕ್ರಮಗಳನ್ನು ಅದ್ಯತೆಯ ಮೇರೆಗೆ ಜರುಗಿಸಲು ಹಾಗೂ ಸದರಿ ಮಾಹಿತಿಯನ್ನು ಮೂಲಸೌಲಭ್ಯ ಅಭಿವೃದ್ಧಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ ಸಲ್ಲಿಸಲು ಕೋರಲಾಗಿರುತ್ತದೆ.

2025-26ನೇ ಸಾಲಿನ ಬಜೆಟ್ ಘೋಷಣೆಯ ಕಂಡಿಕೆ 154ರಲ್ಲಿ ಬಾಗಲಕೋಟೆಯಲ್ಲಿ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಘಟಕ ವೈದ್ಯಕೀಯ ಕಾಲೇಜನ್ನು ಹಾಗೂ ಕೋಲಾರದಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಆಧಾರದ ಮೇಲೆ ವೈದ್ಯಕೀಯ ಕಾಲೇಜನ್ನು ಆರಂಬಿಸಲು ಉದ್ದೇಶಿಸಲಾಗಿದೆ ಎಂದು ಘೋಷಿಸಲಾಗಿರುತ್ತದೆ.

ಬಾಗಲಕೋಟೆಯಲ್ಲಿ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಘಟಕ ವೈದ್ಯಕೀಯ ಕಾಲೇಜನ್ನು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವ ವಿದ್ಯಾಲಯದ ಅನುದಾನದಲ್ಲಿ ಪ್ರಾರಂಭಿಸಲು ಕ್ರಮವಹಿಸಲಾಗುತ್ತಿದೆ ಸದರಿ ಕಾಮಗಾರಿಗೆ ಅನುದಾನ ಮೀಸಲಿರಿಸಿರುವ ಬಗ್ಗೆ ದೃಢೀಕರಣವನ್ನು ಸಲ್ಲಿಸುವಂತೆ ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಇವರಿಗೆ ದಿನಾಂಕ:18.06.2025 ರ ಪತ್ರ ಹೊರಡಿಸಲಾಗಿರುತ್ತದೆ. ಸದರಿ ವೈದ್ಯಕೀಯ ಕಾಲೇಜಿನ ಕಾಮಗಾರಿಯನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಆಧಾರದ ಮೇಲೆ ಕೈಗೊಳ್ಳುತ್ತಿರುವುದಿಲ್ಲ ಎಂದು ತಿಳಿಸುತ್ತಾ.

ಮುಂದುವರೆದು, 2025-26ನೇ ಸಾಲಿನ ಆಯವ್ಯಯ ಕಂಡಿಕೆ 154 ರ ಘೋಷಣೆಯಂತೆ ಕೋಲಾರದಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ವೈದ್ಯಕೀಯ ಕಾಲೇಜು ಸ್ಥಾಪಿಸುವ ಸಂಬಂಧ ಅಂತಿಮಗೊಳಿಸಲಾಗಿರುವ ಸರ್ವೆ ನಂ.19 ಏಕಾಂಬಹಳ್ಳಿ ಗ್ರಾಮ, ಕಸಬಾ ಹೋಬಳಿ, ಕೋಲಾರ ತಾಲ್ಲೂಕು ಮತ್ತು ಜಿಲ್ಲೆಯಲ್ಲಿ ಇರುವ 22 ಎಕರೆ 20 ಗುಂಟೆ ವಿಸ್ತೀರ್ಣದ ಜಮೀನನ್ನು ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಬೆಂಗಳೂರು ಇವರ ಹೆಸರಿಗೆ ವರ್ಗಾಯಿಸಿ ಕೊಡುವಂತೆ ಜಿಲ್ಲಾಧಿಕಾರಿ ಕೋಲಾರ ಇವರಿಗೆ ದಿನಾಂಕ:22.07.2025ರ ಪತ್ರ ಹೊರಡಿಸಲಾಗಿರುವ ಮಾಹಿತಿಯನ್ನು ತಮಗೆ ಸಲ್ಲಿಸಿದೆ.

24/7

22-07-25

**(ಶಿವಲಿಂಗಪ್ರಭು ವಾಲಿ)**
ಸರ್ಕಾರದ ಅಧೀನ ಕಾರ್ಯದರ್ಶಿ-2
ವೈದ್ಯಕೀಯ ಶಿಕ್ಷಣ ಇಲಾಖೆ

22/07/25

**ಇವರಿಗೆ**
ಸರ್ಕಾರದ ಕಾರ್ಯದರ್ಶಿ
ಮೂಲ ಸೌಲಭ್ಯ ಅಭಿವೃದ್ಧಿ
ಬಂದರುಗಳು ಮತ್ತು ಒಳನಾಡು
ಜಲಸಾರಿಗೆ ಇಲಾಖೆ
ಬೆಂಗಳೂರು

DIR (PPP)

ವಿಷಯ:- 2025-26 ನೇ ಸಾಲಿನ ಬಜೆಟ್ ಪ್ಯಾರಾ ಸಂಖ್ಯೆ 154 ರಲ್ಲಿ ಘೋಷಿಸಿರುವಂತೆ ಕೋಲಾರದಲ್ಲಿ ವೈದ್ಯಕೀಯ ಕಾಲೇಜನ್ನು ಪಿಪಿಪಿ ಅಡಿಯಲ್ಲಿ ಅಭಿವೃದ್ಧಿಪಡಿಸುವ ಬಗ್ಗೆ.

---

ಐಡಿಡಿ 65 ಐಟಿಎಸ್2025 (1853653)

ಮೂಲಸೌಲಭ್ಯ ಅಭಿವೃದ್ಧಿ, ಬಂದರು
ಮತ್ತು ಒಳನಾಡು ಜಲಸಾರಿಗೆ ಇಲಾಖೆ
ದಿನಾಂಕ: 05.08.2025

ದಿನಾಂಕ:21-07-2025ರಂದು ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ಇ-ಮೇಲ್ ಮುಖಾಂತರ ಸ್ವೀಕೃತವಾದ ಪರಿಕಲ್ಪನಾ ಟಿಪ್ಪಣಿಯನ್ನು ಪರಿಶೀಲಿಸಲಾಯಿತು. ಕೋಲಾರದಲ್ಲಿ ಹೊಸ ವೈದ್ಯಕೀಯ ಕಾಲೇಜನ್ನು ಪಿಪಿಪಿ ಅಡಿಯಲ್ಲಿ ಅಭಿವೃದ್ಧಿಗೊಳಿಸಲು ರೂ.450 ಕೋಟಿಗಳನ್ನು ಅಂದಾಜಿಸಲಾಗಿರುತ್ತದೆ. ಹಾಲಿ ಇರುವ ಜಿಲ್ಲಾ ಆಸ್ಪತ್ರೆಯು 14.30 ಎಕರೆ ಜಾಗದಲ್ಲಿದ್ದು, ಹೊಸ ಮೆಡಿಕಲ್ ಕಾಲೇಜು ಕಟ್ಟಡಗಳಿಗೆ ಹೆಚ್ಚುವರಿಯಾಗಿ 10.0 ಎಕರೆ ಜಾಗವನ್ನು ಗುರುತಿಸಬೇಕಾಗಿರುತ್ತದೆ ಎಂದು ತಿಳಿಸಲಾಗಿರುತ್ತದೆ. ಪರಿಕಲ್ಪನಾ ಟಿಪ್ಪಣಿಯು ದಿನಾಂಕ:25-07-2025 ರಂದು ಅನುಮೋದನೆಗೊಂಡಿರುವುದರಿಂದ ಸದರಿ ಯೋಜನೆಗೆ ಬೇಕಾಗಿರುವ ಹೆಚ್ಚುವರಿ ಜಾಗವನ್ನು ಸಂಬಂಧಪಟ್ಟ ಇಲಾಖೆಯಿಂದ ಹಸ್ತಾಂತರಿಸಿಕೊಳ್ಳಲು ಕ್ರಮ ಕೈಗೊಳ್ಳುವುದು ಹಾಗೂ ಹೆಚ್ಚುವರಿ ಜಾಗವನ್ನು ಪಡೆದ ನಂತರ ಪಿಪಿಪಿ ಕೋಶದ Empanelled list ನಲ್ಲಿ ನೋಂದಾಯಿಸಲ್ಪಟ್ಟಿರುವ ವ್ಯವಹರಣಾ ಸಲಹೆಗಾರರನ್ನು (TA) ನೇಮಿಸಿಕೊಳ್ಳಲು ಕ್ರಮ ಕೈಗೊಳ್ಳುವುದು.

(ಮಾನ್ಯ ಕಾರ್ಯದರ್ಶಿಗಳು,
ಮೂಲಸೌಲಭ್ಯ ಅಭಿವೃದ್ಧಿ, ಬಂದರು
ಮತ್ತು ಒಳನಾಡು ಜಲಸಾರಿಗೆ
ಇಲಾಖೆರವರಿಂದ ಅನುಮೋದಿತ)

(ಪುರುಷೋತ್ತಮ್ ಸಿಂಗ್.ಬಿ. ಹೆಚ್, ಕೆ.ಟಿ.ಎಸ್)
ನಿರ್ದೇಶಕರು ,(ಪ್ರ) ಪಿಪಿಪಿ ಕೋಶ,
ಮೂಲಸೌಲಭ್ಯ ಅಭಿವೃದ್ಧಿ, ಬಂದರುಗಳು
ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಇವರಿಗೆ,
ನಿರ್ದೇಶಕರು,
ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶನಾಲಯ
ಓಲ್ಡ್ ಬಿ.ಎಂ.ಸಿ.ಆರ್.ಐ
ಕೆ.ಆರ್. ರಸ್ತೆ ಬೆಂಗಳೂರು

**ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ ದಿನಾಂಕ 06.08.2025 ರಂದು ನಡೆದ 34ನೇ ಪಿಪಿಪಿ ಯೋಜನೆಗಳ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯ ನಡವಳಿಗಳು**

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಲಗತ್ತಿಸಿದೆ.

ಸರ್ಕಾರದ ಕಾರ್ಯದರ್ಶಿಗಳು, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಹಾಗೂ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಪಿಪಿಪಿ ಯೋಜನೆಗಳ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿಯ ಅಧ್ಯಕ್ಷರಾದ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಸಮಿತಿಯ ಇತರ ಸದಸ್ಯರುಗಳು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಇಲಾಖೆಗಳ ಮುಖ್ಯಸ್ಥರುಗಳು, ಅಧಿಕಾರಿಗಳನ್ನು ಸ್ವಾಗತಿಸಿದರು.

ಮುಂದುವರೆಸಿ, 34ನೇ ಪಿಪಿಪಿ ಯೋಜನೆಗಳ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯ ಕಾರ್ಯಸೂಚಿಯಲ್ಲಿ ತಿಳಿಸಿದಂತೆ, ವಿಷಯಸೂಚಿಯನ್ವಯ ಯೋಜನೆಗಳನ್ನು ಪ್ರಾತ್ಯಕ್ಷಿಕೆಯ ಮೂಲಕ ಚರ್ಚೆಗೆ ಮಂಡಿಸಿದರು.

**ವಿಷಯ-1 ದಿನಾಂಕ 17.05.2025 ರಂದು ಜರುಗಿದ 33ನೇ ಪಿಪಿಪಿ ಯೋಜನೆಗಳ ರಾಜ್ಯಮಟ್ಟದ ಏಕಗವಾಕ್ಷಿ ಸಮಿತಿ ಸಭೆಯ ನಡವಳಿಯನ್ನು ಓದಿ ದೃಢೀಕರಿಸುವುದು.**

ದಿನಾಂಕ 17.05.2025 ರಂದು ಜರುಗಿದ 33ನೇ ಪಿಪಿಪಿ ಯೋಜನೆಗಳ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯ ನಡವಳಿಯನ್ನು ಓದಲಾಯಿತು. ಸದರಿ ನಡವಳಿಗಳ ಮೇಲೆ ಇಲಾಖೆಗಳಿಂದ ಯಾವುದೇ ಸಲಹೆಗಳು / ಪ್ರತಿಕ್ರಿಯೆ ಬಾರದೇ ಇರುವುದರಿಂದ, ಸಭೆಯು ನಡವಳಿಯನ್ನು ಸ್ವೀಕರಿಸಿ ದಾಖಲಿಸಿತು.

**ವಿಷಯ-2 ದಿನಾಂಕ 17.05.2025 ರಂದು ಜರುಗಿದ 33ನೇ ಪಿಪಿಪಿ ಯೋಜನೆಗಳ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯ ನಡವಳಿಗಳ ನಿರ್ದೇಶನಗಳ ಮೇಲೆ ಆಡಳಿತ ಇಲಾಖೆ / ಸಂಸ್ಥೆಗಳು ತೆಗೆದುಕೊಂಡ ಕ್ರಮದ ಬಗ್ಗೆ 34ನೇ ಸಭೆಗೆ ಮಂಡಿಸಲು ನೀಡಲಾದ ಅನುಪಾಲನಾ ವರದಿ**

| ಸಂ ಖ್ಯೆ | ವಿಷಯ | ಇಲಾಖೆ | 34ನೇ ಸಭೆಗೆ ಮಂಡಿಸಲು ಆಡಳಿತ ಇಲಾಖೆಯಿಂದ ಸ್ವೀಕೃತ ಮಾಹಿತಿ | 34ನೇ ಸಭೆಯ ನಿರ್ದೇಶನ |
|---|---|---|---|---|
| 3.1 | ಕೊಡಗು ಜಿಲ್ಲೆ ಮಡಿಕೇರಿಯ ಗ್ರೇಟರ್ ರಾಜಾ ಸೀಟು | ತೋಟಗಾರಿಕೆ | ರಿಯಾಯಿತಿದಾರರ ಆಯ್ಕೆಗೆ ಟೆಂಡರ್ ಆಹ್ವಾನಿಸಲಾಗಿದ್ದು, | ರಿಯಾಯಿತಿದಾರರನ್ನು ಕೂಡಲೇ ಆಯ್ಕೆ ಮಾಡಿ |

| ಸಂಖ್ಯೆ | ವಿಷಯ | ಇಲಾಖೆ | 34ನೇ ಸಭೆಗೆ ಮಂಡಿಸಲು ಆಡಳಿತ ಇಲಾಖೆಯಿಂದ ಸ್ವೀಕೃತ ಮಾಹಿತಿ | 34ನೇ ಸಭೆಯ ನಿರ್ದೇಶನ |
|---|---|---|---|---|
| | ಉದ್ಯಾನವನದಲ್ಲಿ ಪಿಪಿ ಮಾದರಿಯಲ್ಲಿ Glass sky walk ಹಾಗೂ Food Court ಗಳನ್ನು ನಿರ್ಮಿಸುವ ಯೋಜನೆ | | ತಾಂತ್ರಿಕ ಬಿಡ್ ಮೌಲ್ಯಮಾಪನ ಪ್ರಗತಿಯಲ್ಲಿದೆ. | ಮುಂದುವರೆಯಲು ನಿರ್ದೇಶಿಸಲಾಯಿತು |
| 3.2 | BSWML ಸಂಸ್ಥೆ ವತಿಯಿಂದ ಸಮಗ್ರ ಘನತ್ಯಾಜ್ಯ ನಿರ್ವಹಣಾ ಯೋಜನೆಯನ್ನು ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿ ಪಡಿಸುವ ಬಗ್ಗೆ. | ನಗರಾಭಿವೃದ್ಧಿ | ರಿಯಾಯಿತಿದಾರರ ಆಯ್ಕೆಗೆ ದಿ: 11.07.2025 ಟೆಂಡರ್ ಪ್ರಕಟಿಸಲಾಗಿದ್ದು, ಬಿಡ್ ಸ್ವೀಕರಿಸಲು ಕೊನೆಯ ದಿನಾಂಕ:13.08.2025 ವಾಗಿದೆ. | ರಿಯಾಯಿತಿದಾರರನ್ನು ಕೂಡಲೇ ಆಯ್ಕೆ ಮಾಡಿ ಮುಂದುವರೆಯಲು ನಿರ್ದೇಶಿಸಲಾಯಿತು |
| 3.3 | ವಿವಿಧ ಆಡಳಿತ ಇಲಾಖೆಗಳು ಅನುಷ್ಠಾನಗೊಳಿಸುವ ಪಿಪಿಪಿ ಯೋಜನೆಗಳ ಸಲಹಾ ಸೇವೆಗೆ ನೇಮಕ ಮಾಡುವ ಸಮಾಲೋಚಕ ಸಲಹೆಗಾರರ ಸೇವಾ ಶುಲ್ಕವನ್ನು ನಿರ್ಧರಿಸಲು ಒಂದು ಚೌಕಟ್ಟನ್ನು ಸ್ಥಾಪಿಸುವ ಕುರಿತು | ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ | Mechanism for Onboarding Transaction Advisors (TAs) for Development of PPP Projects in Karnataka ಕುರಿತು ಸುತ್ತೋಲೆಯನ್ನು ಹೊರಡಿಸಲಾಗಿದೆ.<br><br>ಮಾನ್ಯ ಮುಖ್ಯ ಕಾರ್ಯದರ್ಶಿಗಳ ಸೂಚನೆಯಂತೆ, DCA ಹಾಗೂ TA RFP ಯಲ್ಲಿ ಬದಲಾವಣೆಗೆ ದಿನಾಂಕ 25.07.2025ರಂದು, Addendum ನ್ನು ಹೊರಡಿಸಲಾಗಿದೆ. | Mechanism for Onboarding Transaction Advisors (TAs) for Development of PPP Projects in Karnataka ಕುರಿತು ಹೊರಡಿಸಲಾಗಿರುವ ದಿ:10.07.2025, ದಿ: 18.07.2025 & 25.07.2025 ರ ಸುತ್ತೋಲೆಗಳನ್ವಯ ಆರ್ಥಿಕ ಬಿಡ್ ಮಾತ್ರ ನಿಯಮಾನುಸಾರ ಆಹ್ವಾನಿಸಿ TA ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಲು ಎಲ್ಲಾ ಆಡಳಿತ ಇಲಾಖೆಗಳಿಗೆ ನಿರ್ದೇಶಿಸಲಾಯಿತು. |

| ಸಂಖ್ಯೆ | ವಿಷಯ | ಇಲಾಖೆ | 34ನೇ ಸಭೆಗೆ ಮಂಡಿಸಲು ಆಡಳಿತ ಇಲಾಖೆಯಿಂದ ಸ್ವೀಕೃತ ಮಾಹಿತಿ | 34ನೇ ಸಭೆಯ ನಿರ್ದೇಶನ |
|---|---|---|---|---|
| 3.4 | ಮೂಲಸೌಕರ್ಯ ಯೋಜನೆಗಳು ಮತ್ತು ಆಡಳಿತ ಇಲಾಖೆಗಳಿಂದ ಸ್ವೀಕೃತವಾದ ಇತರ ಪ್ರಸ್ತಾವನೆಗಳಿಗೆ ತಾತ್ವಿಕ ಅನುಮೋದನೆ / ಅನುಸಮರ್ಥನೆ ಕೋರಿ | | | |
| | 1. ಮಲ್ಪೆ ಮೀನುಗಾರಿಕಾ ಬಂದರಿನಲ್ಲಿ "ಮಲ್ಟಿ-ಲೆವೆಲ್ ಪಾರ್ಕಿಂಗ್" | | ದಿ. 27.06.2025 ರಂದು ವ್ಯವಹರಣಾ ಸಲಹೆಗಾರರನ್ನು ನೇಮಿಸಲಾಗಿ ಯೋಜನಾ ವರದಿಗಳು ತಯಾರಿಕೆ ಹಂತದಲ್ಲಿದೆ. | ಎಂಪ್ಯಾನಲ್ Transaction Advisors (TA) ಯಿಂದ ಹಾಗೂ ದಿ:10.07.2025, ದಿ: 18.07.2025 & 25.07.2025 ರ ಸುತ್ತೋಲೆಗಳನ್ವಯ ಕೂಡಲೇ ಆರ್ಥಿಕ ಬಿಡ್ ಮಾತ್ರ ನಿಯಮಾನುಸಾರ ಆಹ್ವಾನಿಸಿ 15 ದಿನದೊಳಗೆ TA ನೇಮಕಾತಿ ಪ್ರಕ್ರಿಯೆಯನ್ನು ಕ್ರಮ ವಹಿಸಲು ನಿರ್ದೇಶಿಸಲಾಯಿತು. |
| | 2. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಣ್ಣೀರುಬಾವಿ ಕಡತ ತೀರದಲ್ಲಿ ರೆಸಾರ್ಟ್ ನಿರ್ಮಾಣ | | ವ್ಯವಹರಣಾ ಸಲಹೆಗಾರರನ್ನು ನೇಮಿಸಲು ಟೆಂಡರ್ ಆಹ್ವಾನಿಸಲು ಕ್ರಮವಹಿಸಲಾಗುತ್ತಿದೆ | |
| | 3. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಕೋಡಿಕಲ್, ಗುರುಪುರ ನದಿ ತೀರದಲ್ಲಿ ರೆಸಾರ್ಟ್ ನಿರ್ಮಾಣ | | ವ್ಯವಹರಣಾ ಸಲಹೆಗಾರರನ್ನು ನೇಮಿಸಲು ಟೆಂಡರ್ ಆಹ್ವಾನಿಸಲು ಕ್ರಮವಹಿಸಲಾಗುತ್ತಿದೆ | |
| 3.5 | 2025-26 ನೇ ಸಾಲಿನ ಆಯವ್ಯಯದಲ್ಲಿ ವಿವಿಧ ಆಡಳಿತ ಇಲಾಖೆಗಳಿಂದ ಘೋಷಣೆಯಾಗಿರುವ ಮೂಲಸೌಕರ್ಯ ಯೋಜನೆಗಳನ್ನು ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿಪಡಿಸುವ | ಆಯಾ ಆಡಳಿತ ಇಲಾಖೆಗಳು | ಈ ವಿಷಯದ ಅನುಪಾಲನಾ ವರದಿ / ಪ್ರಗತಿಯನ್ನು 34ನೇ ಅಜೆಂಡಾದ ವಿಷಯ ಸಂಖ್ಯೆ: 3.3 ರಲ್ಲಿ ಮಂಡಿಸಿದೆ. | 34ನೇ SLSWA ಸಭೆಯ ವಿಷಯ ಸಂ. 3.3 ರಲ್ಲಿ ನಿರ್ದೇಶಿಸಲಾಗಿದೆ. |

| ಸಂಖ್ಯೆ | ವಿಷಯ | ಇಲಾಖೆ | 34ನೇ ಸಭೆಗೆ ಮಂಡಿಸಲು ಆಡಳಿತ ಇಲಾಖೆಯಿಂದ ಸ್ವೀಕೃತ ಮಾಹಿತಿ | 34ನೇ ಸಭೆಯ ನಿರ್ದೇಶನ |
|---|---|---|---|---|
| | ಪ್ರಸ್ತಾವನೆಗಳ ಪ್ರಗತಿ ಪರಿಶೀಲನೆ. | | | |
| 3.6 | 2024-25ನೇ ಸಾಲಿನ ಆಯವ್ಯಯದಲ್ಲಿ ಘೋಷಿತವಾದ ವಿವಿಧ ಆಡಳಿತ ಇಲಾಖೆಗಳ ಮೂಲಸೌಕರ್ಯ ಯೋಜನೆಗಳನ್ನು ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಕುರಿತು ಪ್ರಗತಿ ಪರಿಶೀಲನೆ | ಆಯಾ ಆಡಳಿತ ಇಲಾಖೆಗಳು | ಈ ವಿಷಯದ ಅನುಪಾಲನಾ ವರದಿ / ಪ್ರಗತಿಯನ್ನು 34ನೇ ಅಜೆಂಡಾದ ವಿಷಯ ಸಂಖ್ಯೆ: 3.4 ರಲ್ಲಿ ಮಂಡಿಸಿದೆ. | 34ನೇ SLSWA ಸಭೆಯ ವಿಷಯ ಸಂ. 3.4 ರಲ್ಲಿ ನಿರ್ದೇಶಿಸಲಾಗಿದೆ. |

ಮೇಲಿನ ಕೋಷ್ಟಕದಲ್ಲಿರುವ ಯೋಜನೆಗಳ ಪ್ರಸಕ್ತ ಹಂತ / ಬೆಳವಣಿಗೆಯ ಮೇಲೆ ಆಡಳಿತ ಇಲಾಖೆಯ ಅಧಿಕಾರಿಗಳು ನೀಡಿದ ಮಾಹಿತಿಯನ್ನು ಸಭೆಯು ಪರಿಗಣಿಸಿ, ಯೋಜನೆಯನ್ನು ಯಶಸ್ವಿಯಾಗಿ ಮುಂದುವರೆಸಲು ಅಗತ್ಯವಿರುವ ಕ್ರಮಗಳನ್ನು ಜರೂರಾಗಿ ಕೈಗೊಳ್ಳುವಂತೆ ಆಡಳಿತ ಇಲಾಖೆಗಳಿಗೆ ನಿರ್ದೇಶಿಸಲಾಯಿತು.

(ಕ್ರಮ: ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು ಆಯಾ ಆಡಳಿತ ಇಲಾಖೆಗಳು)

**ವಿಷಯ-3 34ನೇ ಪಿಪಿಪಿ ಯೋಜನೆಗಳ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಚರ್ಚಿಸಲು ಮಂಡಿಸಲಾದ ಹೊಸ ಪ್ರಸ್ತಾವನೆಗಳ ಕಾರ್ಯಸೂಚಿ**

**3.1 ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲೂಕಿನ ಬೈರಪಟ್ಟಣ ತೋಟದಲ್ಲಿ ಪಿಪಿಪಿ ಮಾದರಿಯಲ್ಲಿ ವಿನ್ಯಾಸ, ನಿರ್ಮಾಣ, ಹಣಕಾಸು, ಕಾರ್ಯಾಚರಣೆ ಮತ್ತು ವರ್ಗಾವಣೆ ಆಧಾರದ ಮೇಲೆ ಬಹು ತೋಟಗಾರಿಕೆ ಉತ್ಪನ್ನ ನಿರ್ವಹಣೆ, ಸಂಸ್ಕರಣೆ ಮತ್ತು ಸಂರಕ್ಷಣೆ ಕ್ಲಸ್ಟರ್‌ನ ಅಭಿವೃದ್ಧಿ, ಹಣಕಾಸು, ಸ್ಥಾಪನೆ ಮತ್ತು ಕಾರ್ಯಾಚರಣೆ ಮತ್ತು ನಿರ್ವಹಣೆ**

ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆಯಿಂದ ಸಲ್ಲಿಸಿರುವ ಪಿಪಿಪಿ ಪ್ರಸ್ತಾವನೆಯ ಸಂಕ್ಷಿಪ್ತ ಮಾಹಿತಿಗಳನ್ನು ಪ್ರಾತ್ಯಕ್ಷಿಕೆಯ ಮೂಲಕ

ಕಾರ್ಯದರ್ಶಿಗಳು, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ರವರು ಸಭೆಗೆ ವಿವರಿಸಿದರು.

**Project Description:**

The Department of Horticulture, Karnataka intends to establish integrated infrastructure facilities for handling, processing, and preservation of horticultural produce near the Ramanagara area. To strengthen value chain linkages, the department proposes to set up a multi-horticulture produce handling, processing, and preservation cluster on a Public-Private Partnership (PPP) basis. This cluster will be located on an identified and demarcated area of approximately 11 acres at Byrapatna Farm (Survey No: 1091/8) in Channapatna Taluk, Ramanagara District.

**Land Area:- 11 acres**

**Concession Period:** 30 years including 2 years of construction period.

**Project Structuring**: Design, Build, Finance, Operate and Transfer (DBFOT)

basis

**Estimated Project Cost:** Rs. 134.34 Crores

**Bidding Parameter:** Highest Annual Concession fee.

**Project Returns:**

- Project IRR: 15.18%
- Equity IRR: 18.09%

ಸದರಿ ವಿಷಯವನ್ನು ಚರ್ಚಿಸಿದ ಸಭೆಯು ಯೋಜನೆಯನ್ನು ಪಿಪಿಪಿ ಮಾದರಿಯಲ್ಲಿ ಮುಂದುವರೆಯಲು 34ನೇ ಪಿಪಿಪಿ ಯೋಜನೆಗಳ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಅನುಮೋದಿಸಿತು. ಪಿಪಿಪಿ ಮಾದರಿಯಲ್ಲಿ ಕೈಗೊಳ್ಳುವ ಯೋಜನೆಗಳಿಗೆ ಸರ್ಕಾರದಿಂದ ಹೊರಡಿಸಲಾಗಿರುವ ಎಲ್ಲಾ ಮಾರ್ಗಸೂಚಿ/ನಿಯಮಗಳನ್ನು ತಪ್ಪದೇ ಪಾಲಿಸವುದು. ಯೋಜನೆಗೆ ಗುರುತಿಸಲಾದ ಕನಿಷ್ಠ ಪ್ರಮಾಣದ ಭೂಮಿಯು ಯೋಜನಾ ಅನುಷ್ಠಾನ ಪ್ರಾಧಿಕಾರದ ಹೆಸರಿನಲ್ಲಿ 'ಋಣಭಾರ ರಹಿತ'ವಾಗಿ ಲಭ್ಯವಿರುವುದನ್ನು ಖಚಿತಪಡಿಸಿಕೊಳ್ಳಲು ಸೂಚಿಸಲಾಯಿತು.

(ಕ್ರಮ: ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ)

**3.2 ಮೂಲಸೌಕರ್ಯ ಯೋಜನೆಗಳನ್ನು ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಆಡಳಿತ ಇಲಾಖೆಗಳಿಂದ ಸ್ವೀಕೃತವಾದ ತಾತ್ವಿಕ ಅನುಮೋದನೆ/ ಅನುಸಮರ್ಥನೆಯ ಕೋರಿಕೆ**

| ಕ್ರ. ಸಂ | ಇಲಾಖೆ | ಪಿಪಿಪಿ ಮಾದರಿಯ ಅಭಿವೃದ್ಧಿಗೆ ಸ್ವೀಕೃತವಾದ ಯೋಜನಾ ಪ್ರಸ್ತಾವನೆಯ ಹೆಸರು | ಅಂದಾಜು ವೆಚ್ಚ (ರೂ. ಕೋಟಿಗಳಲ್ಲಿ) |
|---|---|---|---|
| 1. | ನಗರಾಭಿವೃದ್ಧಿ | BWSSB ವತಿಯಿಂದ ಎಸ್.ಟಿ.ಪಿ ಘಟಕಗಳ ತ್ಯಾಜ್ಯವನ್ನು ಬಳಸಿ ಬಯೋಗ್ಯಾಸ್-ಆಧಾರಿತ ಆದಾಯ ಮತ್ತು ಕಾರ್ಬನ್ ಕ್ರೆಡಿಟ್‌ಗಳ ಉಪಯೋಗವನ್ನು ಪಡೆಯುವ ನಿಟ್ಟಿನಲ್ಲಿ ಯೋಜನೆಯ ರೂಪಿಸುವಿಕೆ | 175.00 |
| 2. | ತೋಟಗಾರಿಕೆ | ನಂದಿ ವ್ಯಾಲಿ ಪ್ರದೇಶದಲ್ಲಿ ವೈನ್ ಪಾರ್ಕ್ ಸ್ಥಾಪಿಸುವ ಪಿಪಿಪಿ ಯೋಜನೆ ಕುರಿತು. | 20.00 |
| 3. | ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ | ಬೆಂಗಳೂರಿನ ನಂದಿನಿ ಲೇಔಟ್‌ನಲ್ಲಿ ಚಲನಚಿತ್ರ ಅಕಾಡೆಮಿಯು ಹೊಂದಿರುವ 2.5 ಎಕರೆ ನಿವೇಶನದಲ್ಲಿ ಬಹುಪರದೆಗಳಿರುವ ಚಿತ್ರಮಂದಿರ ಸಮುಚ್ಚಯದ ಸ್ಥಾಪನೆ | 120.00 |
| 4. | ಪ್ರವಾಸೋದ್ಯಮ | ಉಡುಪಿ ಜಿಲ್ಲೆಯ ತ್ರಾಸಿ ಮರವಂತೆ ಬೀಚ್ ಬಳಿ ಬಹು-ಉತ್ಪನ್ನ ಪ್ರವಾಸೋದ್ಯಮ ವಲಯವನ್ನು ಸೂಕ್ತ ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿಪಡಿಸುವುದು. | 100.00 |
| 5. | | ಉಡುಪಿ ಜಿಲ್ಲೆಯ ಕೋಡಿ ಕುಂದಾಪುರ ಬೀಚ್ ಬಳಿ ಸೂಕ್ತ ಪಿಪಿಪಿ ಮಾದರಿಯಲ್ಲಿ ರೆಸಾರ್ಟ್ ಅಭಿವೃದ್ಧಿಪಡಿಸುವುದು. | 70.00 |
| 6. | | ಉಡುಪಿ ಜಿಲ್ಲೆಯ ಬಂಡೂರು ಕೋಟೆಯಲ್ಲಿ ಸೂಕ್ತವಾದ ಪಿಪಿಪಿ ಮಾದರಿಯಲ್ಲಿ ಹೆರಿಟೇಜ್ ಹೋಟೆಲ್ ಅಭಿವೃದ್ಧಿಪಡಿಸುವುದು. | 60.00 |
| 7. | ವೈದ್ಯಕೀಯ ಶಿಕ್ಷಣ | ಕೋಲಾರದಲ್ಲಿ ವೈದ್ಯಕೀಯ ಕಾಲೇಜು ಸ್ಥಾಪನೆ | 450.00 |
| 8. | ಸಹಕಾರ | ಕೆಎಸ್‌ಡಬ್ಲ್ಯೂಸಿ ಗೋದಾಮುಗಳ ಮೇಲ್ಛಾವಣಿಯಲ್ಲಿ ಸೌರ ಛಾವಣಿಯ ಪಿವಿ ವ್ಯವಸ್ಥೆಯನ್ನು ಅಳವಡಿಸುವ ಪ್ರಸ್ತಾಪ | 250.00 |
| 9. | ವಸತಿ | ಸರ್ಕಾರದ ಭೂಮಿಯನ್ನು ಬಳಸಿ ಖಾಸಗಿ ಸಹಭಾಗಿತ್ವದೊಂದಿಗೆ ವಸತಿ ಘಟಕಗಳ | 500.00 |

| ಕ್ರ. ಸಂ | ಇಲಾಖೆ | ಪಿಪಿಪಿ ಮಾದರಿಯ ಅಭಿವೃದ್ಧಿಗೆ ಸ್ವೀಕೃತವಾದ ಯೋಜನಾ ಪ್ರಸ್ತಾವನೆಯ ಹೆಸರು | ಅಂದಾಜು ವೆಚ್ಚ (ರೂ. ಕೋಟಿಗಳಲ್ಲಿ) |
|---|---|---|---|
| | | ನಿರ್ಮಾಣ ಹಾಗೂ ಆರ್ಥಿಕವಾಗಿ ದುರ್ಬಲ ವರ್ಗದ ಜನರಿಗೆ ಹಂಚುವಿಕೆ ಯೋಜನೆ | |

ಮೇಲಿನ ಯೋಜನೆಗಳಿಗೆ ಪಿಪಿಪಿ ಮಾದರಿಯಲ್ಲಿ ಮುಂದುವರೆಯಲು ತಾತ್ವಿಕ ಅನುಮೋದನೆ ನೀಡಿರುವುದನ್ನು ಗಮನಿಸಿದ ಸಭೆಯು ಯೋಜನೆಯ ಕಾರ್ಯಸಾಧ್ಯತೆ ವರದಿ ಹಾಗೂ ಬಿಡ್ ದಾಖಲೆಗಳನ್ನು (Feasibility Report, RFP, RFQ, Draft Concessionaire Agreement) ತಯಾರಿಸಲು ಎಂಪ್ಯಾನಲ್ Transaction Advisors (TA) ಯಿಂದ ಹಾಗೂ ದಿ:10.07.2025, ದಿ: 18.07.2025 & 25.07.2025 ರ ಸುತ್ತೋಲೆಗಳನ್ವಯ ಕೂಡಲೇ ಆರ್ಥಿಕ ಬಿಡ್ ಮಾತ್ರ ನಿಯಮಾನುಸಾರ ಆಹ್ವಾನಿಸಿ 15 ದಿನದೊಳಗೆ TA ನೇಮಕಾತಿ ಪ್ರಕ್ರಿಯೆಯನ್ನು ಕ್ರಮ ವಹಿಸಲು 34ನೇ ಪಿಪಿಪಿ ಯೋಜನೆಗಳ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ನಿರ್ದೇಶಿಸಲಾಯಿತು.

(ಕ್ರಮ: ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಎಲಾಖೆ; ಕಾರ್ಯದರ್ಶಿಗಳು, ತೋಟಗಾರಿಕೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ, ಪ್ರವಾಸೋಧ್ಯಮ, ವಸತಿ, ಸಹಕಾರ ಇಲಾಖೆ; ಮತ್ತು ಪ್ರಧಾನ ಕಾರ್ಯದರ್ಶಿಗಳು, ವೈದ್ಯಯಕೀಯ ಶಿಕ್ಷಣ ಇಲಾಖೆ)

## 3.3 2025-26 ನೇ ಸಾಲಿನ ಆಯವ್ಯಯದಲ್ಲಿ ವಿವಿಧ ಆಡಳಿತ ಇಲಾಖೆಗಳಿಂದ ಘೋಷಣೆಯಾಗಿರುವ ಮೂಲಸೌಕರ್ಯ ಯೋಜನೆಗಳನ್ನು ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಪ್ರಸ್ತಾವನೆಗಳ ಪ್ರಗತಿಯ ಪರಿಶೀಲನೆ

| ಕ್ರ. ಸ. | ಘೋಷಣೆ ಸಂ. | ಇಲಾಖೆ | ಯೋಜನಾ ಪ್ರಸ್ತಾವನೆ | 34ನೇ ಸಭೆಗೆ ಮಂಡಿಸಲಾದ ಪ್ರಸ್ತುತ ಹಂತ | 34ನೇ ಸಭೆಯ ನಿರ್ಣಯ |
|---|---|---|---|---|---|
| 1. | 48 | ತೋಟಗಾರಿಕೆ | ತೋಟಗಾರಿಕಾ ಬೆಳೆಗಳ ವಿಸ್ತೀರ್ಣ, ಉತ್ಪಾದನೆ, ಅರೋಗ್ಯ, ಮಾರುಕಟ್ಟೆ ಇತ್ಯಾದಿಗಳ ಬಗ್ಗೆ ರೈತರಿಗೆ ಮಾಹಿತಿ ಒದಗಿಸಲು ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸ್ಪೇಸ್ ಸೈನ್ಸ್ ಟೆಕ್ನಾಲಜಿ ಮತ್ತು ಖಾಸಗಿ | ಪರಿಕಲ್ಪನಾ ಟಿಪ್ಪಣಿ ಸ್ವೀಕೃತಿಗೆ ಬಾಕಿ ಇದೆ. | ಪರಿಕಲ್ಪನಾ ಟಿಪ್ಪಣಿಯನ್ನು ಕೂಡಲೇ ತಯಾರಿಸಿ ಸಲ್ಲಿಸಲು ಸೂಚಿಸಲಾಯಿತು. |

| ಕ್ರ. ಸ. | ಘೋಷಣೆ ಸಂ. | ಇಲಾಖೆ | ಯೋಜನಾ ಪ್ರಸ್ತಾವನೆ | 34ನೇ ಸಭೆಗೆ ಮಂಡಿಸಲಾದ ಪ್ರಸ್ತುತ ಹಂತ | 34ನೇ ಸಭೆಯ ನಿರ್ಣಯ |
|---|---|---|---|---|---|
| | | | ಸಹಯೋಗದಲ್ಲಿ ಜ್ಞಾನ ಕೋಶ ಸ್ಥಾಪನೆ | | |
| 2. | 51 | ತೋಟಗಾರಿಕೆ | ತೋಟಗಾರಿಕಾ ಇಲಾಖೆಯ ಅಧೀನದ ಆಯ್ದ ಕ್ಷೇತ್ರಗಳು ಮತ್ತು ನರ್ಸರಿಗಳಡಿ ಸಾರ್ವಜನಿಕ ಖಾಸಗಿ ಸಹಯೋಗದೊಂದಿಗೆ ಹೂ-ಕೃಷಿ, ಅಲಂಕಾರಿಕ ಸಸ್ಯಗಳು, ಔಷಧಿ ಸಸ್ಯಗಳನ್ನು ಬೆಳೆಸಲು ಹಾಗೂ ತೋಟಗಾರಿಕಾ ಪ್ರವಾಸೋದ್ಯಮವನ್ನು ಉತ್ತೇಜಿಸಲು ಯೋಜನೆ ರೂಪಿಸುವಿಕೆ. | ಪರಿಕಲ್ಪನಾ ಟಿಪ್ಪಣಿ ಸ್ವೀಕೃತಿಗೆ ಬಾಕಿ ಇದೆ. | ಪರಿಕಲ್ಪನಾ ಟಿಪ್ಪಣಿಯನ್ನು ಕೂಡಲೇ ತಯಾರಿಸಿ ಸಲ್ಲಿಸಲು ಸೂಚಿಸಲಾಯಿತು. |
| 3. | 74 | ಮೀನುಗಾರಿಕೆ | ಮಲ್ಪೆ ಮೀನುಗಾರಿಕಾ ಬಂದರಿನಲ್ಲಿ ವಾಹನ ದಟ್ಟಣೆಯನ್ನು ನಿರ್ವಹಿಸಲು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ "ಮಲ್ಟಿ-ಲೆವೆಲ್ ಪಾರ್ಕಿಂಗ್" ವ್ಯವಸ್ಥೆಯ ನಿರ್ಮಾಣ. | ದಿ.27.06.2025 ರಂದು M/s Kalinth ರವರನ್ನು ವ್ಯವಹರಣಾ ಸಲಹೆಗಾರರನ್ನಾಗಿ ನೇಮಕಮಾಡಿ ಯೋಜನೆಯ feasibility report ತಯಾರಿಸಲಾಗುತ್ತಿದೆ. | ಕರಡು ಬಿಡ್ ದಾಖಲೆಗಳನ್ನು ಕೂಡಲೇ ತಯಾರಿಸಿ PPPAC ಯ ಪರಿಶೀಲನೆಗೆ ಮಂಡಿಸಲು ನಿರ್ದೇಶಿಸಲಾಯಿತು. |
| 4. | 154 | ವೈದ್ಯಕೀಯ ಶಿಕ್ಷಣ | ಬಾಗಲಕೋಟೆಯಲ್ಲಿ ರಾಜೀವ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಘಟಕ ವೈದ್ಯಕೀಯ ಕಾಲೇಜು ಹಾಗೂ ಕೋಲಾರದಲ್ಲಿ ವೈದ್ಯಕೀಯ ಕಾಲೇಜಿನ ಸ್ಥಾಪನೆ | ದಿ.22.07.2025 ರಂದು IDeck ರವರನ್ನು ನೇಮಕ ಮಾಡಲಾಗಿದೆ.<br><br>ದಿನಾಂಕ:28.07.2025 ರಂದು ತಾತ್ವಿಕ ಅನುಮೋದನೆ ನೀಡಲಾಗಿದೆ. | ಕರಡು ಬಿಡ್ ದಾಖಲೆಗಳನ್ನು ಕೂಡಲೇ ತಯಾರಿಸಿ PPPAC ಯ ಪರಿಶೀಲನೆಗೆ ಮಂಡಿಸಲು ನಿರ್ದೇಶಿಸಲಾಯಿತು |

| ಕ್ರ. ಸ. | ಘೋಷಣೆ ಸಂ. | ಇಲಾಖೆ | ಯೋಜನಾ ಪ್ರಸ್ತಾವನೆ | 34ನೇ ಸಭೆಗೆ ಮಂಡಿಸಲಾದ ಪ್ರಸ್ತುತ ಹಂತ | 34ನೇ ಸಭೆಯ ನಿರ್ಣಯ |
|---|---|---|---|---|---|
| 5. | 244 | ವಸತಿ | ಸರ್ಕಾರದ ಭೂಮಿಯನ್ನು ಬಳಸಿ ಖಾಸಗಿ ಸಹಭಾಗಿತ್ವದೊಂದಿಗೆ ವಸತಿ ಘಟಕಗಳ ನಿರ್ಮಾಣ ಹಾಗೂ ಆರ್ಥಿಕವಾಗಿ ದುರ್ಬಲ ವರ್ಗದ ಜನರಿಗೆ ಹಂಚುವಿಕೆ ಯೋಜನೆ | ದಿನಾಂಕ:05.08.2025 ರಂದು ತಾತ್ವಿಕ ಅನುಮೋದನೆ ನೀಡಲಾಗಿದೆ. | ಎಂಪ್ಯಾನಲ್ Transaction Advisors (TA) ಯಿಂದ ಹಾಗೂ ದಿ:10.07.2025, ದಿ: 18.07.2025 & 25.07.2025 ರ ಸುತ್ತೋಲೆಗಳನ್ವಯ ಕೂಡಲೇ ಆರ್ಥಿಕ ಬಿಡ್ ಮಾತ್ರ ನಿಯಮಾನುಸಾರ ಆಹ್ವಾನಿಸಿ 15 ದಿನದೊಳಗೆ TA ನೇಮಕಾತಿ ಪ್ರಕ್ರಿಯೆಯನ್ನು ಕ್ರಮ ವಹಿಸಲು ನಿರ್ದೇಶಿಸಲಾಯಿತು. |
| 6. | 271 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | ಗ್ರಾಮ ಪಂಚಾಯಿತಿಗಳ ಮೇಲಿನ ವಿದ್ಯುತ್ ವೆಚ್ಚದಿಂದ ಉಂಟಾಗುವ ಆರ್ಥಿಕ ಹೊರೆಯನ್ನು ಕಡಿಮೆ ಮಾಡಲು ಸೌರ ಮೈಕ್ರೋ-ಗ್ರಿಡ್‌ಗಳ ಸ್ಥಾಪನೆ. | ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ಲಿಮಿಟೆಡ್ (GESCOM), ರಿಯಾಯಿತುದಾರರನ್ನು ಆಯ್ಕೆ ಮಾಡಲು GESCOM ವತಿಯಿಂದ ಟೆಂಡರ್ ದಿ:10.06.2025 ರಂದು ಆಹ್ವಾನಿಸಲಾಗಿದೆ | ರಿಯಾಯಿತಿದಾರರನ್ನು ಕೂಡಲೇ ಆಯ್ಕೆ ಮಾಡಿ ಮುಂದುವರೆಸಲು ನಿರ್ದೇಶಿಸಲಾಯಿತು |
| 7. | 275 | ಗ್ರಾಮೀಣಾಭಿವೃದ್ಧಿ ಮತ್ತು | ಗ್ರಾಮ ಪಂಚಾಯಿತಿಗಳಿಗೆ ಸುಸ್ಥಿರ ಆದಾಯ | ಪರಿಕಲ್ಪನಾ ಟಿಪ್ಪಣಿ ತಯಾರಿಕೆ ಹಂತದಲ್ಲಿದೆ | ಪರಿಕಲ್ಪನಾ ಟಿಪ್ಪಣಿಯನ್ನು ಕೂಡಲೇ |

| ಕ್ರ. ಸ. | ಘೋಷಣೆ ಸಂ. | ಇಲಾಖೆ | ಯೋಜನಾ ಪ್ರಸ್ತಾವನೆ | 34ನೇ ಸಭೆಗೆ ಮಂಡಿಸಲಾದ ಪ್ರಸ್ತುತ ಹಂತ | 34ನೇ ಸಭೆಯ ನಿರ್ಣಯ |
|---|---|---|---|---|---|
| | | ಪಂಚಾಯತ್ ರಾಜ್ | ಮೂಲಗಳನ್ನು ಬಲಪಡಿಸಲು, ಗ್ರಾಮ ಪಂಚಾಯಿತಿಗಳ ಆಸ್ತಿಗಳನ್ನು ಆದಾಯ ಉತ್ಪಾದನೆಗೆ ಬಳಸಿಕೊಳ್ಳುವ ಯೋಜನೆ | | ತಯಾರಿಸಿ ಸಲ್ಲಿಸಲು ಸೂಚಿಸಲಾಯಿತು. |
| 8. | 288 | ನಗರಾಭಿವೃದ್ಧಿ | BWSSB ವತಿಯಿಂದ ಎಸ್.ಟಿ.ಪಿ ಘಟಕಗಳ ತ್ಯಾಜ್ಯವನ್ನು ಬಳಸಿ ಬಯೋಗ್ಯಾಸ್-ಆಧಾರಿತ ಆದಾಯ ಮತ್ತು ಕಾರ್ಬನ್ ಕ್ರೆಡಿಟ್‌ಗಳ ಉಪಯೋಗವನ್ನು ಪಡೆಯುವ ನಿಟ್ಟಿನಲ್ಲಿ ಯೋಜನೆಯ ರೂಪಿಸುವಿಕೆ | ದಿ.07.03.2025 ರಂದು KPMG ರವರನ್ನು ವ್ಯವಹರಣಾ ಸಲಹೆಗಾರರನ್ನಾಗಿ ನೇಮಕಮಾಡಿ ಯೋಜನೆಯ ಕರಡು ಬಿಡ್ ದಾಖಲೆಗಳನ್ನು ತಯಾರಿಸಲಾಗುತ್ತಿದೆ. | ಕರಡು ಬಿಡ್ ದಾಖಲೆಗಳನ್ನು ಕೂಡಲೇ ತಯಾರಿಸಿ PPPAC ಯ ಪರಿಶೀಲನೆಗೆ ಮಂಡಿಸಲು ನಿರ್ದೇಶಿಸಲಾಯಿತು |
